**ದಿನಾಂಕ: 23-01-2019 ರಂದು ಶ್ರೀ.ಎಸ್.ಮುನಿಸ್ವಾಮಿ, ಕಾಡುಗುಡಿ ವಾರ್ಡ್ ಸಂಖ್ಯೆ: 83, ಪಾಲಿಕೆ ಸದಸ್ಯರ ಹಾಗೂ ವಾರ್ಡ್ ಸಮಿತಿಯ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಮಟ್ಟದಲ್ಲಿ ನಡೆದ ಸಭೆಯ ನಡವಳಿಗಳು**

**ಹಾಜರಿದ್ದ ಅಧಿಕಾರಿ ಹಾಗೂ ಸಿಬ್ಬಂದಿಗಳು**

1) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ, ವೈಟ್‌ಫೀಲ್ಡ್ ಉಪವಿಭಾಗ
2) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ, ರಸ್ತೆಮೂಲಭೂತ ಸೌಕರ್ಯಗಳ ವಿಭಾಗ, ಮಹದೇವಪುರ
3) ಸಹಾಯಕ ಅಭಿಯಂತರರು, ಕಾಡುಗುಡಿ ವಾರ್ಡ್ ನಂ.83
4) ಸಹಾಯಕ ಕಂದಾಯ ಅಧಿಕಾರಿಗಳು, ವೈಟ್‌ಫೀಲ್ಡ್ ಉಪವಿಭಾಗ,
5) ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕಾಡುಗುಡಿ
6) ಕಂದಾಯ ಪರಿವೀಕ್ಷಕರು, ಕಾಡುಗುಡಿ ವಾರ್ಡ್ ನಂ.83
7) ಕಂದಾಯ ವಸೂಲಿಗಾರರು, ಕಾಡುಗುಡಿ ವಾರ್ಡ್ ನಂ.83
8) ಹಿರಿಯ ಆರೋಗ್ಯ ನಿರೀಕ್ಷಕರು, ಕಾಡುಗುಡಿ ವಾರ್ಡ್ ನಂ.83
9) ಘನತಾಜ್ಯ ಪರಿವೀಕ್ಷಕರು, ಕಾಡುಗುಡಿ ವಾರ್ಡ್ ನಂ: 83
10) ಕಿರಿಯ ಅಭಿಯಂತರರು, ಬೆಸ್ಕಾಂ
11) ಎಲ್ಲಾ ಕಾಡುಗುಡಿ ವಾರ್ಡ್ ಕಮಿಟಿ ಸದಸ್ಯರು ಮತ್ತು ಸಾರ್ವಜನಿಕರು

**ದಿನಾಂಕ: 23/01/2019, ವಾರ್ಡ್ ಕಛೇರಿಯಲ್ಲಿ ಬೆಳ್ಳಿಗೆ 11.30 ಘಂಟೆಗೆ ಹಾಜರಿದ್ದ ಮಾನ್ಯ ಪಾಲಿಕೆ ಸದಸ್ಯರು ಹಾಗೂ ಕಮಿಟಿ ಸದಸ್ಯರು ಮತ್ತು ಹಾಜರಿದ್ದ ಸಿಬ್ಬಂದಿಯನ್ನು ಸ್ವಾಗತಿಸುತ್ತಾ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

1. ಕಾಡುಗುಡಿ ವಾರ್ಡ್ ನಂ: 83 ರಲ್ಲಿ ಮೆಕ್ಯಾನಿಕಲ್ ಸ್ವೀಪಿಂಗ್ ಮೇಷಿನ್ ವಾಹನವು ಕಾರ್ಯನಿರ್ವಹಿಸುತ್ತಿಲ್ಲವೆಂದು ಈ ಬಗ್ಗೆ ತುರ್ತಾಗಿ ಕಾಡುಗುಡಿ ವಾರ್ಡಿನ ವ್ಯಾಪ್ತಿಯಲ್ಲಿನ ಎಲ್ಲಾ ಮೇಜರ್ ರಸ್ತೆಗಳಲ್ಲಿ ಮೆಕ್ಯಾನಿಕಲ್ ಸ್ವೀಪಿಂಗ್ ಮೆಷಿನ್ ವಾಹನದಿಂದ ರಸ್ತೆಯನ್ನು ಸ್ವಚ್ಚಗೊಳಿಸಲು ಸ.ಕಾ.ಅ(ಘ.ತ್ಯಾ.ನಿ) ರವರಿಗೆ ನಿರ್ದೇಶಿಸಿದರು

   ಕ್ರಮ: ಸ.ಕಾ.ಅ ಘನತ್ಯಾಜ್ಯ ನಿರ್ವಹಣೆ

2. ಕಾಡುಗುಡಿ ವಾರ್ಡಿನಲ್ಲಿ ವಿದ್ಯುತ್ ಕಂಬಗಳಲ್ಲಿ ಬೀದಿ ದೀಪಗಳನ್ನು ದುರಸ್ತಿ ಪಡಿಸಲು ಸಾರ್ವಜನಿಕರಿಂದ ದೂರುಗಳು ಬರುತ್ತಿದ್ದು, ಗುತ್ತಿಗೆದಾರರಿಗೆ ಬೀದಿ ದೀಪಗಳನ್ನು ದುರಸ್ತಿ ಪಡಿಸಿಸಲು ಸೂಚಿಸಲು ತಿಳಿಸಿರುತ್ತಾರೆ.

   ಕ್ರಮ: ಸಹಾಯಕ ಅಭಿಯಂತರರು,

3. ವಾರ್ಡ್ ವ್ಯಾಪ್ತಿಯಲ್ಲಿರುವ ಅಡ್ಡರಸ್ತೆ ಮತ್ತು ಮುಖ್ಯರಸ್ತೆಗಳಲ್ಲಿ ಸುಮಾರು ದಿನಗಳಿಂದ ನಿಲ್ಲಿಸಿರುವ ದ್ವಿಚಕ್ರ ವಾಹನಗಳನ್ನು ತೆಗೆಯಲು ಟ್ರಾಫಿಕ್ ಪೋಲೀಸ್ ರವರಿಗೆ ಪತ್ರ ಒರೆದು ಕ್ರಮ ಕೈಗೊಳ್ಳಲು ಸೂಚಿಸಿದರು.

   ಕ್ರಮ: ಸಹಾಯಕ ಅಭಿಯಂತರರು,

4. ಕಾಡುಗುಡಿ ವಾರ್ಡ್ ವ್ಯಾಪ್ತಿಯ ಕೆಲವು ಪ್ರದೇಶಗಳಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ, ವತಿಯಿಂದ ಒಳಚರಂಡಿ ಮತ್ತು ಕಾವೇರಿ ಕುಡಿಯುವ ನೀರಿಗೆ ಬಿಟ್ಟು ಹೋಗಿರುವ ರಸ್ತೆಗಳಲ್ಲಿ ತುರ್ತಾಗಿ ಕ್ರಮಕೈಗೊಂಡು ಕಾಮಗಾರಿಗಳನ್ನು ಪೂರ್ಣಗೊಳಸಲು ಸೂಚಿಸಿದರು

   ಕ್ರಮ: ಸ,ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ,

Scanned by CamScanner

5. ಕಾಡುಗುಡಿ ವಾರ್ಡ್ ವ್ಯಾಪಿಯಲ್ಲಿ ಬರುವ ಕಾಡುಗುಡಿ ಸಂತೆಯಲ್ಲಿ ಬರುವ ಕಸವನ್ನು ಸಂರ್ಪಕವಾಗಿ ಒಂದು ಕಡೆ ಸಂಗ್ರಹ ಮಾಡಿ ಕಸವನ್ನು ಸಾಗಣೆ ಮಾಡಲು ಸೂಚಿಸಲಾಗಿದೆ.

ಕ್ರಮ: ಸಹಾಯಕ ಕಂದಾಯ ಅಧಿಕಾರಿಗಳು, ವೈಟ್‌ಫೀಲ್ಡ್ ಉಪವಿಭಾಗ ಬಿ.ಬಿ.ಎಂ.ಪಿ

6. ಕಾಡುಗುಡಿ ವಾರ್ಡಿನಲ್ಲಿ ಪುಟ್ ಪಾತ್ ತೆರವುಗೊಳಿಸುವ ಕಾರ್ಯಕ್ರಮವನ್ನು ಅರ್ಮಿಕೊಳ್ಳಲು ಸೂಚಿಸಿದರು.

ಕ್ರಮ: ಸಹಾಯಕ ಅಭಿಯಂತರರು

ಸಹಿ/-
ಕಾರ್ಯದರ್ಶಿ
ವಾರ್ಡ್ ನಂ: 83
ಕಾಡುಗುಡಿ

ಸಹಿ/-
ಅಧ್ಯಕ್ಷರು
ವಾರ್ಡ್ ನಂ: 83, ಕಾಡುಗುಡಿ

ಪ್ರತಿಯನ್ನು:

1) ಕೌನ್ಸಿಲ್ ಕಾರ್ಯದರ್ಶಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.
2) ಮಾನ್ಯ ಜಂಟಿ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮಹದೇವಪುರ ವಲಯ
3) ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ, ಮಹದೇವಪುರ ವಲಯ
4) ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ, ಮಹದೇವಪುರ ವಿಭಾಗ
5) ಸಹಾಯಕ ಕಾರ್ಯಪಾಲಕ ಅಭಿಯಂತರರು, ವೈಟ್‌ಫೀಲ್ಡ್ ಉಪವಿಭಾಗ, ಬಿಬಿಎಂಪಿ
6) ಸಹ ಕಂದಾಯ ಅಧಿಕಾರಿಗಳು, ವೈಟ್‌ಫೀಲ್ಡ್ ಉಪವಲಯ, ಬಿಬಿಎಂಪಿ
7) ಸಹ ಕಂದಾಯ ಅಧಿಕಾರಿಗಳು, ಜಾಹಿರಾತು, ಬಿಬಿಎಂಪಿ
8) ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ

Scanned by CamScanner